ಪಾಸ್ ಆಗಿದ್ದು, ಮತ್ತು ಅವರೇ ಐದು ಗಂಟೆ ಏಳು ನಿಮಿಷಕ್ಕೆ ವಾಪಸ್ ಹೋಗಿದ್ದು ಕ್ಯಾಪ್ಚರ್ ಆಗಿದೆ... ನೋಡಿ."

"ಸ್ಟಾಪ್."

ಆ ವಿಡಿಯೊವನ್ನು ತದೇಕಚಿತ್ತದಿಂದ ನೋಡುತ್ತಿದ್ದ ಧನಂಜಯ ಕೂಗಿದ. ಅವನು ನಿಲ್ಲಿಸಿದ ಕ್ಷಣದಲ್ಲಿ, ಆ ಇಬ್ಬರು ಮುಸುಕುಧಾರಿಗಳು ಆ ಅಂಗಡಿಯ ಮುಂದಿದ್ದ ಸಿ.ಸಿ ಟೀವಿ ಕ್ಯಾಮೆರಾದ ಕಡೆಗೇ ನೋಡುತ್ತಿದ್ದರು.

"ಹೋಗುವಾಗಲೂ ನೋಡುತ್ತಿದ್ದರು ಅಲ್ಲವಾ?"

"ಹೌದು ಸರ್... ಅದೇ ನನ್ನ ಅನುಮಾನ... ಎಲ್ಲರೂ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಾರೆ ಇವರು ಅಲ್ಲಿಯೇ ನೋಡುತ್ತಿದ್ದಾರೆ ಅಂದರೆ ಅದೇನೋ ಅರ್ಥ ಆಗುತ್ತಿಲ್ಲ."

"ಅಲ್ಲಿ ಯಾರೋ ಇದ್ದಿರಬಹುದಾ?... ಅವನೇ ಈ ಕೃತ್ಯಗಳ ಮಾಸ್ಟರ್ ಮೈಂಡ್ ಇರಬಹುದಾ? ಆ ಕಡೆ ತಿರುಗಿ ನೋಡಿದ್ದು ಅವನಿಗೆ ಕೆಲಸ ಆಗಿದೆ ಎಂದು ತಿಳಿಸಲಾ? ಆ ಸೂಪರ್ ಮಾರ್ಕೆಟ್‌ನಲ್ಲಿ ವಿಚಾರಿಸು... ಮತ್ತಿನ್ನಾವುದಾದರೂ ಕ್ಯಾಮೆರಾದಲ್ಲಿ ಏನಾದರೂ ಸಿಗುತ್ತದೆಯಾ ನೋಡು..."

ರವಿಯನ್ನು ಕಳುಹಿಸಿದ ಮೇಲೂ ಧನಂಜಯ ಆ ಕೊಲೆ ಮತ್ತು ರಾಬರಿಯ ಬಗ್ಗೆಯೇ ಯೋಚಿಸತೊಡಗಿದ್ದ. ಮುಖ್ಯವಾಗಿ ಆ ಅಡುಗೆಯವನ ಬಗ್ಗೆ.

'ಮೊದಲ ಸಾಧ್ಯತೆ, ಇವರ ಮನೆಯಲ್ಲಿ ಹಣ ಇರಬಹುದೆಂದು ತಿಳಿದು ಅಡುಗೆಯನಂತೆ ವೇಷ ಧರಿಸಿ ಬಂದು, ಸಮಯ ನೋಡಿ, ತನ್ನ ಸಹಚರರನ್ನು ಕರೆದು, ಹಣ ಒಡವೆ ಕದಿಯಲು ಪ್ಲಾನ್ ಮಾಡಿರಬಹುದು. ಮೆಲ್ಲನೆ ಚುಚ್ಚುವ ಬದಲು ಜೋರಾಗಿ ಚುಚ್ಚಿದ್ದಾರೆ. ಬದುಕಿದರೆ ಅವನು ಬಾಯಿ ಬಿಡುತ್ತಾನೆ ಅಂತಾ ತಿಳಿದು ಅವನನ್ನು ಕೊಂದು ಎಲ್ಲಾ ಕದ್ದೊಯ್ದಿದ್ದಾರೆ.

ಅಥವಾ ಟಾರ್ಗೆಟ್ ಅಡುಗೆಯವನಲ್ಲ!

'ಟಾರ್ಗೆಟ್ ನಿರ್ಮಲ್... ಅವನ ಕೊಲೆ ಮಾಡಲೇ ಬಂದಿದ್ದಾರೆ, ಸಾಯಿಸಿದವನು ಅವನಲ್ಲ ಎಂದು ಗೊತ್ತಾಗಿ ಹೆದರಿಕೊಂಡು, ಇಡೀ ಘಟನೆ ರಾಬರಿ ಮಾಡುವುದಕ್ಕಾಗಿ ನಡೆದಿರುವುದು ಅಂತಾ ಬಿಂಬಿಸಲು ನಾಟಕ ಮಾಡಿದ್ದಾರೆ.'

★★★

"ಈ ಚಿತ್ರದಲ್ಲಿದ್ದವರೆನಾ ನಿಮ್ಮ ಮನೆಗೆ ನುಗ್ಗಿದ್ದು?" ಸಿ.ಸಿ ಟೀವಿಯ ಚಿತ್ರಗಳನ್ನು ತೋರಿಸುತ್ತಾ ಕೇಳಿದ ಧನಂಜಯ.

ಆ ಮನೆಯಲ್ಲಿ ಒಂದು ಘನಘೋರ ಕೊಲೆ ಆಗಿರುವ ಆಘಾತದಿಂದ ನಿರ್ಮಲ್ ಮತ್ತು ಅವನ ಪತ್ನಿ ಸ್ವಲ್ಪ ಚೇತರಿಸಿಕೊಂಡ ಹಾಗೆ ಕಾಣಿಸಿತು ಧನಂಜಯನಿಗೆ.

"ಹೀಗೇ ಮುಖ ಮುಚ್ಚಿಕೊಂಡಿದ್ದರು. ನಮ್ಮ ಹತ್ತಿರ ಕನ್ನಡದಲ್ಲಿ ಮಾತಾಡಿದರು. ಆದರೆ ಅವರು ಮಾತಾಡಿಕೊಳ್ಳುವಾಗ, ಬೇರೆ ಭಾಷೆ ಮಾತಾಡುತ್ತಿದ್ದರು. ಅದು ಬಂಗಾಳಿನಾ ಅಥವಾ ಒರಿಯಾನಾ ತಿಳಿಯಲಿಲ್ಲ."

ಅವನ ಮಾತುಗಳನ್ನು ಅರ್ಧದಲ್ಲಿಯೇ ನಿಲ್ಲಿಸುತ್ತಾ ಕೇಳಿದ ಧನಂಜಯ.

"ನಿಮ್ಮ ಅಡುಗೆಯವ ಯಾವಾಗ ಸೇರಿದ್ದು?"

ಗಂಡಹೆಂಡತಿ ಮುಖ ಮುಖ ನೋಡಿಕೊಂಡರು. ಅವರಿಬ್ಬರ ಮಧ್ಯೆ ಅದೇನೋ ಸಂಭಾಷಣೆ ಕಣ್ಣಿನಲ್ಲಿಯೇ ನಡೆಯಿತು. ಅವರಿಬ್ಬರೂ ಮಾತಾಡದಿದ್ದುದ್ದನ್ನು ಕಂಡು, ಸ್ವಲ್ಪ ಏರುಧ್ವನಿಯಲ್ಲಿಯೇ ಮತ್ತೆ ಕೇಳಿದ ಧನಂಜಯ.